ವಿಜಯ ಕರ್ನಾಟಕ

**Monday, January 31st, 2011**

# ಜೈನ್ ಕಾಲೇಜಿನಲ್ಲಿ ಟ್ಯಾಲೆಂಟ್ ಹಂಟ್

ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವತಿಯಿಂದ ಟ್ಯಾಲೆಂಟ್ ಹಂಟ್ ಆರಂಭಿಸಲಾಗಿದೆ.

ಇದು ಸಾಂಸ್ಕೃತಿಕ ಆಯಾಮದಲ್ಲಿ ನಡೆಯುವ ಪ್ರತಿಭಾನ್ವೇಷಣೆಯಾಗಿದ್ದು ರಾಷ್ಟ್ರಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ. ಫೆ.1 ರಿಂದ ಕಾರ್ಯ ಕ್ರಮಗಳು ಆರಂಭವಾಗಲಿವೆ. ಮೊದಲನೇ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಮ್ಯಾನೇಜ್‌ಮೆಂಟ್ ಕ್ಷೇತ್ರಕ್ಕೆ ಸಂಬಂಧಿಸಿದ ವಿಭಿನ್ನ ಚಟುವಟಿಕೆಗಳು ನಡೆಯಲಿವೆ. ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಫೆ. 1ರಂದು ಈ ಕಾರ್ಯಕ್ರಮ ನಡೆಯಲಿದೆ.



ಫೆ.2 ಹಾಗೂ 3 ರಂದು ಇದೇ ಸ್ಥಳದಲ್ಲಿ ಸಾಂಸ್ಕೃತಿಕ ಸ್ಪರ್ಧೆಗಳು ನಡೆಯಲಿವೆ. ಇದರಲ್ಲಿ ನೃತ್ಯ, ಸಂಗೀತ ಮುಂತಾದ ರಂಗಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ. ಫೆ.4 ಹಾಗೂ 5 ರಂದು ಜಯನಗರದ ಜೆಎಸ್‌ಎಸ್ ಸಭಾಂಗಣದಲ್ಲಿ ಅಭಿನಯ ರಂಗಕ್ಕೆ ಸಂಬಂಧಿಸಿದ ಸ್ಪರ್ಧೆಗಳು ನಡೆಯಲಿವೆ. ಈ ಫೆಸ್ಟಿವಲ್‌ನಲ್ಲಿ ದೇಶದ ಹತ್ತಾರು ಕಾಲೇಜುಗಳು ಭಾಗವಹಿಸುತ್ತಿವೆ.

ಅಲ್ಲದೇ ಅಂತಾರಾಷ್ಟ್ರೀಯ ಮಟ್ಟದ ಸ್ಪರ್ಧೆಗೂ ಇದು ವೇದಿಕೆಯಾಗಿದೆ. ಮಕಾವು ದೇಶದ ವೆನಿಷಿಯನ್‌ದಲ್ಲಿ ಫೆ.20–27 ರವರೆಗೆ ಜರುಗಲಿರುವ ಅಂತಾರಾಷ್ಟ್ರೀಯ ಮ್ಯಾನೇಜ್‌ಮೆಂಟ್ ಫೆಸ್ಟ್ ನಲ್ಲಿಯೂ ಇಲ್ಲಿ ವಿಜೇತರಾದ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ.